

# ನಗುನಗುತಾ ನಲಿ ನಲೀ ಏನೇ ಆಗಲಿ

■ ನಿರೂಪಣೆ: ರೂಪಾ ಕೆ.ಎಂ., ರಾಘವೇಂದ್ರ ಕೆ.

ನಗಿಸುತ್ತ, ಜನರ ನಗುವನ್ನು ನೋಡಿ ಮತ್ತೆ ನಗಿಸಲು ಮುಂದಾಗುವ ಕಲಾವಿದರು ತಮ್ಮ ಪೇಚಿನ ಪ್ರಸಂಗಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ತಮ್ಮ ಬದುಕಿನಲ್ಲಿ ಬೇಸರದ ಕ್ಷಣಗಳನ್ನು ಕಳೆಯುವುದು ಹೇಗೆ ಎಂಬುದನ್ನೂ ಹಂಚಿಕೊಂಡಿದ್ದಾರೆ. ನಕ್ಕರದೇ ಸ್ವರ್ಗ ಎಂಬಂತೆ ಮತ್ತೆ ನಗುತ್ತ ದಿನಗಳೆಯುವುದನ್ನೂ ಇಲ್ಲಿ ಹೇಳಿದ್ದಾರೆ.

## ಚಿಕ್ಕ ಚಿಕ್ಕ ಸಂಗತಿಯಲ್ಲಿ ಅಡಗಿದ ಹಾಸ್ಯ ಹೆಕ್ಕುವ ಘನ ದೃಷ್ಟಿಕೋನ ಬೇಕು



ದೀಕ್ಷಾ ಎಸ್.ಎಂ. ಬ್ರಹ್ಮಾವರ

ನಗುವುದು, ನಗಿಸುವುದು ಎರಡೂ ಕೂಡ ಸಹಜಧರ್ಮ. ಅಂದಮೇಲೆ ನಗಿಸಲು ಏನೇನೋ ಕಸರತ್ತು ಮಾಡಬೇಕಾಗಿಲ್ಲ. ಹಾಗೆಂದು ನಗಿಸುವುದು ಅಷ್ಟು ಸುಲಭದ ಮಾತೂ ಅಲ್ಲ.

ತನ್ನನ್ನು ತಾನೇ ನಗುವಿನ 'ಕಂಟೆಂಟ್' ಆಗಿಸುವುದು ಬೇರೆ, ಇತರರ ದೇಹ, ಭಾಷೆ, ಭಾವ ಇವೆಲ್ಲವನ್ನೂ ಕಂಟೆಂಟ್ ರೂಪಕ್ಕೆ ಇಳಿಸಿ, ನಗಿಸುವುದು ಬೇರೆ. ನಗುವಿನ ಬುಗ್ಗೆ ಹೊಮ್ಮಲು ಇನ್ನೊಬ್ಬರನ್ನೇನೂ ಮೂರ್ಖರನ್ನಾಗಿಸಬೇಕಾಗಿಲ್ಲ. ನಾವು ನೋಡುವ ಸುತ್ತಮುತ್ತಲಿನ ಜಗತ್ತಿನ ಚಿಕ್ಕ ಚಿಕ್ಕ ಸಂಗತಿಯಲ್ಲಿ ಅಡಗಿರುವ ಹಾಸ್ಯವನ್ನು ಹೆಕ್ಕುವ ಘನವಾದ ದೃಷ್ಟಿಕೋನವೊಂದಿರಬೇಕು. ಅದು ಮಾತಿನ ಲಹರಿಗೂ ದಕ್ಕುವ ಹಾಗಿದ್ದಾಗಷ್ಟೆ ಹಾಸ್ಯ ನೋಡುಗರ ಮನಮುಟ್ಟುತ್ತದೆ.

***

ನಾನು ನಿತ್ಯ ಬದುಕಿನ ಆಗುಹೋಗುಗಳಲ್ಲಿರುವ ಸಣ್ಣಪುಟ್ಟ ಸಂಗತಿಗಳನ್ನೇ ಕಂಟೆಂಟ್‌ಗೆ ವಸ್ತುವಿಷಯವನ್ನಾಗಿ ಆರಿಸಿಕೊಳ್ಳುತ್ತೇನೆ. ಹಾಗೆ ಮಾಡುವುದರಿಂದ ಆದಷ್ಟು ಬೇಗ ನೋಡುಗರನ್ನು ತಲುಪಲು ಸಾಧ್ಯ ಎಂದು ನಂಬಿದ್ದೇನೆ. ಆದಷ್ಟು ಕುಂದಾಪುರ ಕನ್ನಡದಲ್ಲಿಯೇ ಕಂಟೆಂಟ್‌ಗಳನ್ನು ಹೊಸೆಯುತ್ತೇನೆ. 'ಸುಧಾ' ಓದುಗರಿಗಾಗಿ...

ಗಂಡ ಮನೇಲಿ ಪಾತ್ರ ತೊಳಿತಾ ಇರ್ತಾ 'ಹಾಯಾಗಿ ಕುಳಿತಿರು ನೀನು ರಾಣಿಯ ಹಾಗೆ, ಮಹಾರಾಣಿಯ ಹಾಗೆ... ಆಯಾಸ ಪಡದಿರು ನೀನು...' ಅಂತ ಅಣ್ಣಾವ್ರ ಹಾಡ್ ಬೇರೆ ಹೇಳಿರ್ತಿತ್ತ. ಹಾಡು ಹೇಳೊದು ಕಂಡ್ಕಂಡ್ ನೀವು ಹೆಂಡ್ತಿ ಪಕ್ಕ ಇದ್ಲ ಅಂದ್ಕೊಂಡ್ರಿ ಅಲಾ. ಇಲ್ಲ ಅವ್ಳ್ ಒಂದು ಮದಿ ಫಂಕ್ಷನ್‌ಗೆ ಅಂತ ಹೋಯಿ ಜಿಗ್ ಆಯಿ ಬತ್ತಳ್. ಕೈಯಲ್ಲಿ ಒಂದು ಕಿಟ್ ಬೇರೆ ಹಿಡ್ಕಂಡ್ ಇರ್ತಳ್. ಗಂಡನ ಹತ್ರ ಗಡಿಬಿಡಿಯಲ್ಲಿ ಬಂದು ಕೇಂತಳ್.. 'ಹೋಯಿ ನಂಗ್ ಜೋರಾ ಹಶಿವೆ ಆತಿತ್. ತಿಂಬುಕೆ ಎಂತಾರೂ ಮಾಡಿ ಇಟ್ಟಿರ್ಯಾ ಇಲ್ಲ ಹಂಗೆ ಸುಮ್ನೆ ಇದ್ರಿಯಾ' ಅಂತ. ಅವನಿಗೆ ಮಸ್ತ್ ಶಾಕ್ ಆತ್, 'ಅಲಾ ಮದಿಗ್ ಅಂತ ಹೋಯ್ಕಂಡ್ ಬಂದ್, ಅಲ್ಲಿ ಸಮಾ ಉಣ್ಕಂಡ್ ಬಂದ್ಮೇಲೂ 'ಹಶೂ' ಆತಿತ್ ಅಂತಳಲ್ಲ... ಇವಳ್ದೆಂತ ಜರ್ದ್ ಹೊಟ್ಟೆ ಮಾರ್ರೆ' ಅಂತ ಮನ್ಸಲ್ಲೆ ಬೈಕಂತ.. ಕಡಿಗೂ ಕೇಂಡೇ ಬಿಡ್ತಾ... 'ಅಲಾ ಮಾರೈತಿ, ಮದಿಗೆ ಹೋಯಿ ಬಂದಿದೆ. ಅಲ್ಲ್ ಊಟ ಹೆಂಗಿದಿತ್ತ್, ಲಾಡು, ಗೀಡು ಎಂತಾರೂ ತತ್ತಿ ಅಂಥ ನಾ ಬಾಯ್ಕುಳ್ಕಂಡ್ ಕಾಂತಿದ್ರೆ, ನೀನ್ ಹಿಂಗ್ ಮಾಡ್ದ್ಯಲ್ಲ'

ಹೆಂಡ್ತಿ ಹಿಂಗ್ ಹೇಳ್ಳ್: 'ಮದಿಯಲ್ ಊಟವೂ ಇಲ್ಲ, ಗೀಟವೂ ಇಲ್ಲ. ಎಲ್ಲಕ್ಕೂ ಮೊದ್ಲು ಗ್ಯಾಸ್ ಇಲ್ಲ ಅಂಬ್ರೇ. ಗ್ಯಾಸ್ ಇಲ್ದೆ ಅಡ್ಗಿ ಮಾಡುಕಾತ್ ಹೇಳಿ. ಅದ್ಕೆ ಹೋದ್ವರಿಗೆಲ್ಲ ಒಂದೊಂದು ಕಿಟ್ ಕೊಟ್ ಬೆಚ್ಚಿರ್.

ಗಂಡ: ಕಿಟ್ಟಾ? ಎಂಥ್ ಕಿಟ್?

ಹೆಂಡ್ತಿ: ಬಿಚ್ಚಿ ಕಾಣಿ ಎಂತ್ ಇತ್ ನೀವೇ ಹೇಳಿ.

ಗಂಡ ಆಶ್ಚರ್ಯದಿಂದ ಕಿಟ್‌ನ ಬಿಚ್ಚಿ ಕಾಂತ. ಅದ್ರಲ್ ನೀರುಳ್ಳಿ, ಟೊಮೆಟೊ, ಉಪ್ಪು, ಅರಿಶಿಣ, ಅಚ್ಚ ಖಾರದ ಪುಡಿ, ಕಡ್ಲಿ, ಅಡಗಿ ಎಣ್ಣೆ, ಅಕ್ಕಿ ಪೂರ ಇರತ್

ಗಂಡ ಫುಲ್ ಶಾಕ್ ಆತ. ಎಂಥ ಅವಸ್ಥಿ ಮಾರ್ರೆ. ಗ್ಯಾಸ್ ಇಲ್ದೆ ಮದಿ ಮನಿ ಕಥಿ ಹಿಂಗ್ ಆಯ್ತ್. ಆರೆ, ಮನೇಲಿ ಕೂಳು ಬೇಸಿ ಹಾಕೂ ಕಾಟ ನಂಗ್ ತಪ್ಪಲಿಲ್ಲಾ ಅಂತ ಮೇಲ್ಕಾಂತ...